ಕೈಬಿಟ್ಟರೆ ತನಗೆ ತಾನೆ ಮುಚ್ಚಿ ಲಾಕ್ ಆಗಿ ಬಿಡುವ ವ್ಯವಸ್ಥೆ. ಕರೆಗಂಟೆಯ ದನಿಗೆ ಹೊರಬಂದ ಅತ್ತಿಗೆ ಒಂದು ರೆಡಿಮೇಡ್ ನಗೆ ನಕ್ಕು, “ಒಳಗೆ ಬಾ.'' ಅಂದಳು. ಹಿಂಬಾಲಿಸಿದೆ. ರೂಮಿನಲ್ಲಿ ಮಗುವಿನ ಅಳುವ ಸದ್ದು. ಅದರಿಂದಲೇ ಮನೆಗೊಂದು ಸಂಜೀವನ ಸಂಚಲನವಿತ್ತು. “ಇವರು ಯಾವಾಗ ಬಂದರು?'' ಏನಾದರೂ ಮಾತಾಡಬೇಕಲ್ಲ ಅಂತ ಸುಮ್ಮನೇ ಕೇಳಿದೆ. “ಮೊನ್ನೆ ತಾನೇ ಬಂದ್ರು. ಮಗುವಿಗೆ ಇಲ್ಲಿನ ವೆದರ್ ಹಿಡಿಸೂದಿಲ್ಲೇನೋ– ತುಂಬ ಅಳ್ತಾಯಿದೆ'' ಅಂದಳು. ಕೈಕಾಲು ತೊಳೆದು ರೂಮಿನೊಳಗೆ ನಡೆದೆ. ಕೆನಡಾದಲ್ಲೇ ಹೆರಿಗೆ–ಬಾಣಂತನ ಮುಗಿಸಿ ಬಂದ ಸೊಸೆ ಸಂಯುಕ್ತಾ ಮೈಮಾಟ ಉಳಿಸಿಕೊಂಡು ಸ್ಮಾರ್ಟಾಗಿದ್ದಳು. “ಮಾಲೂ ಆಂಟೀ, ಹೇಗಿದೀರಾ?'' ಅಂದಾಗ ಮುಖದ ತುಂಬ ಉಕ್ಕುವ ಸ್ನೇಹಭಾವವಿತ್ತು. ಹಿತವೆನಿಸಿತು. ಜತೆಗಿದ್ದ ತಾಯಿ ಸುಚರಿತಾ ಮಿಶ್ರಾ ವಿದೇಶದ ಛಾಪನ್ನು ಕಳೆಯಗೊಡದೆ, ನಿಲುವು, ನಡತೆ, ಉಡುಪುಗಳಲ್ಲೂ ಸಾಕಷ್ಟು ಬಿಗಿಯನ್ನು ಉಳಿಸಿಕೊಂಡಂತಿತ್ತು. ನಮ್ಮತ್ತಿಗೆಗೆ ಸರಿಯಾದ ಬೀಗಿತಿ ಅಂದುಕೊಂಡೆ. ಮೂರುತಿಂಗಳ ಮಧುರ ಮೈಗಂಪು ಸೂಸುತ್ತಿದ್ದ ಮುದ್ದುಕಂದನನ್ನು ಕೈಗೆತ್ತಿಕೊಂಡೆ. ಹೆಗಲಿಗೇರಿಸಿ ತಟ್ಟಿದಾಗ ಅಲ್ಲಿಗೇ ನಿದ್ದೆಗೆ ಜಾರಿದ ಮಗು ತಲೆಮಾರುಗಳ ನಡುವಿನ ಮೋಹಕ ಬೆಸುಗೆಯೆನಿಸಿತು.

ಸ್ನಾನ ಮಾಡಿ ತಲೆಯೊರಸಿಕೊಳ್ಳುತ್ತ ಬಂದ ಅಣ್ಣ, “ಸಾಯಂಕಾಲ ಬಂದ್ಯಾ? ಬಾ ಊಟ ಮಾಡೋಣ'' ಅಂದಾಗ ಮೈ–ಮನಗಳಲ್ಲಿ ಸಣ್ಣ ಸುಖದ ಸಂಚಾರ. ಹಾಗೇ ಹಿಂಬಾಲಿಸಿದೆ. ಊಟದ ನಡುವೆ ಒಂದಷ್ಟು ಮಾತು ಜತೆನೀಡಿದಾಗ ಅದೆಷ್ಟೋ ಸಹನೀಯವೆನಿಸಿತು. ಸೊಸೆಯ ಬಸಿರಿನ ದಿನಗಳಲ್ಲಿ ಫಾರಿನ್ನಿಗೆ ಹೋಗಿ ಬಂದ ಅಣ್ಣ–ಅತ್ತಿಗೆ ಅಲ್ಲಿನ ವಿಶೇಷಗಳ ಬಗೆಗೆ ಅಭಿಮಾನವಾಗಿಯೇ ಹೇಳಿಕೊಂಡರು. ದೂರದ ದೆಹಲಿಯಲ್ಲಿರುವ ಮಗಳನ್ನು ಮನಸ್ವೀಯಾಗಿ ನೆನೆದುಕೊಂಡರು. ಮಕ್ಕಳ ವಿಚಾರ ಬಂದಾಗ ಅಣ್ಣನೊಳಗೆ ಅದುಮಿಡಲಾರದ ಗೆಲುವಿದೆ. ಅತ್ತಿಗೆಗೆ ಆಡಿದಷ್ಟೂ ಮುಗಿಯದ ಸ್ವಕೀಯ ಸ್ವಾಯತ್ತ ವೃತ್ತಾಂತಗಳಿವೆ. ಜತೆಗೆ ಹೊಸದಾಗಿ ಬಳಕೆಯಾದ ಇಂಗ್ಲೀಷೂ ಅವರೊಳಗೆ ಸ್ವತಂತ್ರ ಶೈಲಿಯಲ್ಲಿ ಸ್ವಾಧೀನ ತೋರುತ್ತಿತ್ತು. ಅಂತಹದೇ ಪರಕೀಯ ಹಿಡಿತ ಮಗನ ಅತ್ತೆಯ ನಿಲುವಿನಲ್ಲೂ ಕಂಡುಬರುತ್ತಿತ್ತು. ಸುಖ–ಸಂತೃಪ್ತಿಯ ಈ ವರ್ತುಲದಲ್ಲಿ ನಾನು ಒಳಗೋ ಹೊರಗೋ ತೀರ್ಮಾನಿಸುವುದು ಸಾಧ್ಯವಾಗುತ್ತಿಲ್ಲ. ಹೊರತಾಗಿ ಉಳಿದ ಒಂದು ಬಿಂದು ಮಾತ್ರವಾಗಿ ಹೋದೆನೆ ಅಂತನಿಸಿತು. ಇದ್ದ ಊರಲ್ಲೆ ಒಂದು ಉದ್ಯಮ ತೊಡಗಿ ತನ್ನಂತಹ ಇನ್ನೊಂದಿಷ್ಟು ಹುಡುಗರಿಗೆ ಉದ್ಯೋಗ ದೊರಕಿಸಿಕೊಟ್ಟು, ತಾನಿರುವಲ್ಲೆ ಒಂದು ಸಶಕ್ತ ಕೇಂದ್ರವಾಗಿ ಉಳಿದ ನನ್ನ ಮಗ –ಅವರೇನೂ ಕೇಳಲಿಲ್ಲ. ನನಗೆ ಹೇಳುವುದೇನೂ ಇರಲಿಲ್ಲ. ರಿಟೈರಾದ ಮೇಲೆ ನನ್ನವರಂತೂ ಎಲ್ಲೂ ಹೊರಡುವುದಿಲ್ಲ. ಇಲ್ಲಿಗಂತೂ ಬೇಕಾದರೆ ನಾನೊಬ್ಬಳೇ ಬರಬೇಕು. ಬರಬೇಕಾದುದು ಅನಿವಾರ್ಯ ಅನಿಸ್ತಾಯಿಲ್ಲ. ಮುಂದೆ?... ಮಗುವನ್ನು ಮಲಗಿಸಿ ಬಂದ ಸಂಯುಕ್ತಾ ನನ್ನ ಹಿಂದೆ ನಿಂತು ಹೆಗಲಸುತ್ತೂ ಕೈಬಳಸಿ ಕೆನ್ನೆಗೆ ಮುಖವೊತ್ತಿ ನಿಂತಾಗ ಒಮ್ಮೆಗೇ ಮೈತುಂಬ ಹೊಸರಕ್ತ ಹರಿದಂತಹ ಪುಲಕ! ಇದು ಸತ್ಯವೆ? ಇವರ ಮದುವೆ ಹೊತ್ತಿಗೆ ಒಂದೆರಡು ದಿನಗಳ ಒಡನಾಟವಷ್ಟೆ ನಮ್ಮೊಳಗೆ ನಡೆದಿತ್ತು. ತೀರ ಅವಸರವಾಗಿ ಅವರು ವಿದೇಶಕ್ಕೆ ಹೋಗಿಯೂ ಆಗಿತ್ತು. ಅಷ್ಟರಲ್ಲೆ ಈ ಬಿಹಾರಿ ಹುಡುಗಿ ನನ್ನನ್ನೂ ಜತೆಗೆ ಸೇರಿಸಿ ಆಪ್ತಜಾಲವೊಂದನ್ನು ಹೆಣೆದಂತಿತ್ತು. ದೇಶ ಭಾಷೆಗಳನ್ನು ಬದಿಗಿರಿಸಿ ಭಾಗ್ಯದ ಬಾಗಿಲ ಮುಂದೆ ಬಾಂಧವ್ಯದ ರಂಗೋಲಿಗೆ ಚುಕ್ಕೆ ಹಾಕಿ ಹೋಗಿದ್ದಳು. ಆಮೇಲೆ ಅಷ್ಟಾಗಿ ಸಂಪರ್ಕವಿಲ್ಲದೆಯೂ ಆ ನೆನಪೇ ಬಹುಶಃ ನನ್ನನ್ನು ಈಗಿಲ್ಲಿಗೆಳೆತಂದಿತ್ತು. ತುಂಬಿಬಂದ ಕಣ್ಣುಗಳನ್ನು ಒಮ್ಮೆ ಮುಚ್ಚಿ ಹಿಡಿದು ಹುಡುಗಿಯನ್ನು ಕೈಚಾಚಿ ಹತ್ತಿರಕ್ಕೆಳೆದುಕೊಂಡೆ.

ಹಚ್ಚಿಟ್ಟ ಹಣತೆಯ ಕಿರಿದಾಗಿಸಿದ ಜ್ವಾಲೆ ಕೋಣೆಯ ವಿವರಗಳನ್ನೆಲ್ಲ ಶಕ್ತಿಮೀರಿ ವ್ಯಕ್ತವಾಗಿಸುವಂತೆ, ನೆನಪಿನ ಪರಿಧಿಯೊಳಗೆ ಹಿಂದಿನ ಹಲವಾರು ಚಿತ್ರಗಳು ಸುತ್ತತೊಡಗಿದುವು.